ತಾರೀಖು 7ನೆ ಜೂನ್ 1907.

ನಂ 11506—ಮೆಡಿಕಲ್ 314-06—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ ಅಸಿಸ್ಟೆಂಟ್ ಸರ್ಜನ್ ಮಿ|| ಎಸ್. ರಂಗಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 12ನೆ ಜೂನ್ 1907.

ನಂ. ಜೆ. 3718—ಕೋರ್ಟ್ಸ್ 261-06-4, ಮೈಸೂರು ಸಿಟಿ ಮಾಜಿಸ್ಟ್ರೇಟ್ ಕೋರ್ಟಿನ ಜಿಮ್ಮೆಯಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್, ಮಿ|| ಎಚ್. ವೆಂಕಟರಾಯರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ, 1907ನೆ ಇಸವಿಯ ಜೂನ್ 15ನೆ ತಾರೀಖಿನಿಂದ ಅಥವಾ ಆ ಮುಂದೆ ಅವರ ಕೆಲಸದ ಚಾರ್ಜ್ ಒಪ್ಪಿಸುವ ತಾರೀಖಿನಿಂದ 1 ತಿಂಗಳು 4 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 29ನೆ ಮೇ 1907.

ನಂ. ರೆ. 10149—ಫಾ. 95-06—3, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಮಿ|| ಪಿ. ಎಸ್. ಗೋವಿಂದರಾಯರಿಗೆ 1907ನೆ ಇಸವಿಯ ಮೇ 14ನೇ ತಾರೀಖಿನಿಂದ ಅಥವಾ ಅನಂತರ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 10 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 30ನೆ ಮೇ 1907.

ನಂ. ರೆ. 10256—ಫಾ. 170-06—4, ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರ್ ಮತ್ತು ಮೈಸೂರು ಸೀಮೆಯಲ್ಲಿ ಬೇಟೆಗಾಗಿ ಮೃಗಗಳನ್ನು ಕಾಪಾಡಿಟ್ಟಿರುವ ಜಂಗಲಿ ಪ್ರದೇಶಗಳ ಚಾರ್ಜಿನಲ್ಲಿರುವ ಆಫಿಸರ್ ಮಿ|| ಕೆ. ಮುತ್ತಯ್ಯನವರಿಗೆ 1907ನೆ ಇಸವಿಯ ಮಾರ್ಚಿ 12ನೆ ತಾರೀಖಿನ ಆರ್. 8256—ಫಾ. 170-06—2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾವನ್ನು ಅವರ ಪ್ರಾರ್ಥನೆಯಮೇರೆಗೆ ಇದರಿಂದ ರದ್ದುಮಾಡಿದೆ.

ತಾರೀಖು 1ನೆ ಜೂನ್ 1907.

ನಂ. ರೆ. 10284—ಫಾ. 106-06—7, 1902ನೆ ಇಸವಿಯ ಫೆಬ್ರವರಿ 13ನೆ ತಾರೀಖಿನ 531-2858ನೆ ನಂಬರಿನ ಮತ್ತು 1903ನೆ ಇಸವಿಯ ಮಾರ್ಚಿ 2ನೆ ತಾರೀಖಿನ 538-5327ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗಳ ಮೇರೆಗೆ ಕೋಲಾರ್ ಡಿಸ್ಟ್ರಿಕ್ಟ್ ಮುಳಬಾಗಿಲ್ ತಾಲ್ಲೂಕು ಗೋವುಕುಂಟೆ ಗೊಲ್ಲಹಳ್ಳಿ ಜಂಗಲಿಯ ಸೆಟ್ಲ್‌ಮೆಂಟಿನ ಬಗ್ಗೆ ನಡೆಸಿದ ಸಮಸ್ತ ನಡವಳಿಕೆಗಳನ್ನೂ ಇದರಿಂದ ರದ್ದುಮಾಡಿದೆ ಎಂದು ತಿಳುವಳಿಕೆಯಬಗ್ಗೆ ಪ್ರಕಟಿಸಿ ಇದೆ.

ತಾರೀಖು 1ನೆ ಜೂನ್ 1907.

ನಂ. ರೆ. 1 315—ಲ್ಯಾ. ರೆ. 427-06 14, 1907ನೆ ಇಸವಿಯ ಮೇ 2ನೆ ತಾರೀಖಿನ ಆರ್. 9672—ಎಲ್. ಆರ್. 427-06—7ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ|| ಪಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ, ಯವರಿಗೆ ಕೊಟ್ಟ ಒಟ್ಟು ಮೂರು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ವೈದ್ಯರ ಸರ್ಟಿಫಿಕೇಟಿನ ಮೇಲೆ ಮೂರು ತಿಂಗಳ ರಜಾವನ್ನು ಸೇರಿಸಿಕೊಟ್ಟಿದೆ.

ತಾರೀಖು 4ನೆ ಜೂನ್ 1907.

ನಂ. ರೆ. 10320—ಫಾ. 95-06—5, 1907ನೆ ಇಸವಿಯ ಮೇ 29ನೆ ತಾರೀಖಿನ ಆರ್. 10149—ಫಾ. 95-06—3ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಮಿ|| ಪಿ. ಎಸ್. ಗೋವಿಂದರಾಯರಿಗೆ ಕೊಟ್ಟ ಹತ್ತು ದಿವಸಗಳ ಪ್ರಿವಿಲೇಜ್ ರಜಾವಿನ ಜತೆಗೆ ಇನ್ನು ಮೂರು ದಿವಸಗಳ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 5ನೆ ಜೂನ್ 1907.

ನಂ. ರೆ. 10430—ಫಾರೆಸ್ಟ್, 198—06—4, 1907ನೆ ಇಸವಿಯ ಮೇ 29ನೆ ತಾರೀಖಿನ ರೆ. 10150—ಫಾರೆಸ್ಟ್ 198—06—2 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಂಗಲುಗಳ ಅಸಿಸ್ಟೆಂಟ್ ಕಂಸರ್ವೇಟರ್ ಮಿ|| ಎಚ್. ರಾಮಯ್ಯನವರಿಗೆ ಕೊಟ್ಟಿದ್ದ ಹದಿನೈದುದಿನಗಳ ಪ್ರಿವಿಲೇಜ್ ರಜಾವನ್ನು, ಇನ್ನೂ ಹದಿನೈದು ದಿವಸಗಳವರೆಗೆ ಹೆಚ್ಚಿಸಿದೆ.